ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಖ್ಯಾಫ್ತ್ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—ಶಿವಮೊಗ್ಗದಲ್ಲಿರುವ ಸವಾಯಿ ನರಸಿಂಗ ರಾಯರ ಮಗ ಕೃಷ್ಣರಾವ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮಾನೆಗಾರ ಮಲ್ಲನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದ ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1887ನೇ ಇಸವಿ ಫಿಬ್ರವರೀ ತಿಂಗಳು 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲದ ಮೊಬಲಗು.	ಇದರಲ್ಲಿ ಈಗ ವಸೂಲಾಗಬೇಕಾದ ಮೊಬಲಗು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ರಾ. ಪ.
1	ಶಿವಮೊಗ್ಗ ಕಸಬಾದಲ್ಲಿರುವ ಸವಾಯಿ ನರಸಿಂಗ ರಾಯರ ಮಗ ಕೃಷ್ಣರಾವ್.	38—0—0	0—0—0	ಶಿವಮೊಗ್ಗ ಸಬ್ ಡಿವೀರ್ಜ್ ಮುನ್ಸಿಫ್ ಕೋರ್ಟು 1886ನೇ ಇಸವಿ ಸ್ಮಾಲ್‌ಕಾಜ್ ನಂ. 530ನೇ ಮೊಡಿಕ್ಕೆ ಬಾಬತು ಮೊಬಲಗು ರೂಪಾಯಿ 38 ಸದರೀ ಮೊಬಲಗು 1ನೇ ಪ್ರತಿವಾದಿ ಸುಬ್ಬಣ್ಣ, ಮತ್ತು 2ನೇ ಪ್ರತಿವಾದಿ ಅರ್ಜಿದಾರಮಲ್ಲನಿಂದ ಸಹ ಸಲತಕ್ಕದ್ದು.	
2	ಶಿವಮೊಗ್ಗ ತಾಲ್ಲೂಕು ಕಸಬಾ ಮಾಗಣಿ ಆದಿರಂಗಸ್ವಾಮಿ ದೇವಸ್ಥಾನದಲ್ಲಿರುವ ಅರ್ಚಿಕ ಸುಬ್ಬಾಭಟ್ಟ.	46—2—2	1—7—83	ಆದಿ ರಂಗಸ್ವಾಮಿ ಅರ್ಚಿಕ ಸುಬ್ಬಾಭಟ್ಟನ ಹೆಸರಿಗೆ ಅರ್ಜಿದಾರಮಲ್ಲನು ಬರದುಕೊಟ್ಟ 83ನೇ ಇಸವಿ ಜುಲೈ 1ನೇ ತಾರೀಖಿನ ಛಾಪಾ ದಸ್ತಾವೇಜು ಸಂಬಂಧ ಮೊಬಲಗು ಅಸೆಲ್ ಬಡ್ಡೀ ದೇಖೀಲ್.	

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

Mysore Government Press, Bangalore.—1887.